## ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1682**
**ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)**
**ಉತ್ತರಿಸಬೇಕಾದ ದಿನಾಂಕ : 18-03-2026**
**ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿರುವ ಪಶುವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು; ಯಾವ ಯಾವ ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ; (ವಿವರ ನೀಡುವುದು) | ರಾಜ್ಯದಲ್ಲಿ ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರನ ಅಧೀನದಲ್ಲಿ ಒಟ್ಟು-06 ಪಶುವೈದ್ಯಕೀಯ ಮಹಾವಿದ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ವಿವರಗಳು ಈ ಕೆಳಗಿನಂತಿದೆ:- (ಕೆಳಗಿನ ಕೋಷ್ಟಕ) |

| ಕ್ರ ಸಂ | ಮಹಾವಿದ್ಯಾಲಯ | ಪ್ರಾರಂಭವಾದ ವರ್ಷ |
|---|---|---|
| 1 | ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ-ಬೆಂಗಳೂರು | 1958-59 |
| 2 | ಪಶುವೈದ್ಯಕೀಯ ಮಹಾವಿದ್ಯಾಲಯ, ಬೀದರ | 1984-85 |
| 3 | ಪಶುವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ | 2006-07 |
| 4 | ಪಶುವೈದ್ಯಕೀಯ ಮಹಾವಿದ್ಯಾಲಯ, ಹಾಸನ | 2007-08 |
| 5 | ಪಶುವೈದ್ಯಕೀಯ ಮಹಾವಿದ್ಯಾಲಯ, ಗದಗ | 2017-18 |
| 6 | ಪಶುವೈದ್ಯಕೀಯ ಮಹಾವಿದ್ಯಾಲಯ, ಅಥಣಿ | 2024-25 |

| ಕ್ರ. ಸಂ | ಪ್ರಶ್ನೆ | ಉತ್ತರಗಳು |
|---|---|---|
| ಆ) | ಕೃಷಿ ಪ್ರಧಾನ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿನ ರೈತರು ಹೈನುಗಾರಿಕೆಯನ್ನು ಅವಲಂಬಿಸಿದ್ದಾರೆ ಹಾಗಾಗಿ ಮಂಡ್ಯ ಜಿಲ್ಲೆಯಲ್ಲೂ ಪಶುವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪಿಸುವ ಕುರಿತು ಸರ್ಕಾರದ ನಿಲುವೇನು; (ಸಂಪೂರ್ಣ ವಿವರ ನೀಡುವುದು) | ಮಂಡ್ಯ ಜಿಲ್ಲೆಯಲ್ಲಿ ಪಶುವೈದ್ಯಕೀಯ ಮಹಾವಿದ್ಯಾಲಯವನ್ನು ಸ್ಥಾಪಿಸುವ ಕುರಿತು ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಇ) | ಮಂಡ್ಯ ಜಿಲ್ಲೆಯಲ್ಲಿರುವ ಜಾನುವಾರುಗಳ ಸಂಖ್ಯೆ ಎಷ್ಟು; ಜಾನುವಾರು ಗಣತಿಯನ್ನು ಕೊನೆಯದಾಗಿ ಯಾವಾಗ ಕೈಗೊಳ್ಳಲಾಗಿತ್ತು (ಜಾನುವಾರು ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು) | **20ನೇ ಜಾನುವಾರುಗಣತಿ (2019) ರ ಪ್ರಕಾರ ಮಂಡ್ಯ ಜಿಲ್ಲೆಯ ಜಾನುವಾರುಗಳ ಸಂಖ್ಯೆ** (ಕೆಳಗಿನ ಕೋಷ್ಟಕ) |

| ಕ್ರ.ಸಂ. | ಜಾನುವಾರು ಗಳು | ಸಂಖ್ಯೆ |
|---|---|---|
| 1 | ದನ | 369986 |
| 2 | ಎಮ್ಮೆ | 109443 |
| 3 | ಕುರಿ | 347133 |
| 4 | ಮೇಕೆ | 346430 |
| 5 | ಹಂದಿ | 9325 |
| 6 | ನಾಯಿ | 23541 |
| 7 | ಇತರೆ | 2602 |
| **8** | **ಒಟ್ಟು** | **1208460** |
| 9 | ಕೋಳಿ | 1997902 |

<table>
<tr><td></td><td></td><td>21ನೇ ಜಾನುವಾರು ಗಣತಿಯನ್ನು ಕೊನೆಯದಾಗಿ 2024-25ನೇ ಸಾಲಿನಲ್ಲಿ ಕೈಗೊಳ್ಳಲಾಗಿತ್ತು ಹಾಗೂ ಸದರಿ ಗಣತಿಯ ವಿವರಗಳನ್ನು ಭಾರತ ಸರ್ಕಾರದ ವತಿಯಿಂದ ಇದುವರೆಗೂ ಬಿಡುಗಡೆಯಾಗದಿರುವುದರಿಂದ 20ನೇ ಜಾನುವಾರು ಗಣತಿಯ ವಿವರಗಳನ್ನು ನೀಡಲಾಗಿರುತ್ತದೆ.</td></tr>
<tr><td>ಈ)</td><td>ಮಂಡ್ಯ ಜಿಲ್ಲೆಗೆ ಮಂಜೂರಾದ ಪಶು ವೈದ್ಯರ ಸಂಖ್ಯೆ ಎಷ್ಟು; ಪ್ರಸ್ತುತ ಎಷ್ಟು ಮಂದಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ;</td><td>ಮಂಡ್ಯ ಜಿಲ್ಲೆಗೆ ಮಂಜೂರಾದ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯರ ಸಂಖ್ಯೆಯ ವಿವರಗಳು ಈ ಕೆಳಕಂಡಂತಿದೆ:-
<table>
<tr><th>ಹುದ್ದೆ</th><th>ಮಂ</th><th>ಭರ್ತಿ</th><th>ಗುತ್ತಿಗೆ</th><th>ಖಾಲಿ</th></tr>
<tr><td>ಉಪ ನಿರ್ದೇಶಕರು</td><td>2</td><td>2</td><td></td><td>0</td></tr>
<tr><td>ಮುಖ್ಯ ಪಶುವೈದ್ಯಾಧಿಕಾರಿಗಳು</td><td>55</td><td>23</td><td>-</td><td>32</td></tr>
<tr><td>ಹಿರಿಯ ಪಶುವೈದ್ಯಾಧಿಕಾರಿಗಳು</td><td>50</td><td>21</td><td>-</td><td>29</td></tr>
<tr><td>ಪಶುವೈದ್ಯಾಧಿಕಾರಿಗಳು</td><td>50</td><td>18</td><td>20</td><td>12</td></tr>
<tr><td>ಒಟ್ಟು</td><td>157</td><td>64</td><td>20</td><td>73</td></tr>
</table></td></tr>
<tr><td>ಉ)</td><td>ಜಾನುವಾರುಗಳ ಒಟ್ಟು ಸಂಖ್ಯೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಪಶು ವೈದ್ಯರ ಅನುಪಾತವನ್ನು ಲೆಕ್ಕ ಹಾಕಿದಾಗ ಎಷ್ಟು ಸಂಖ್ಯೆ ಜಾನುವಾರುಗಳಿಗೆ ಒಬ್ಬ ವೈದ್ಯರು ಸೇವೆ ದೊರೆಯಲಿದೆ (ವಿವರ ನೀಡುವುದು)</td><td>ಮಂಡ್ಯ ಜಿಲ್ಲೆಯಲ್ಲಿ ಜಾನುವಾರುಗಳ ಒಟ್ಟು ಸಂಖ್ಯೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಪಶುವೈದ್ಯರ ಅನುಪಾತವನ್ನು ಲೆಕ್ಕಹಾಕಿದಾಗ 6793 ಜಾನುವಾರುಗಳಿಗೆ ಒಬ್ಬ ಪಶುವೈದ್ಯರ ಸೇವೆ ದೊರೆಯಲಿದೆ.</td></tr>
<tr><td>ಊ)</td><td>ಜಿಲ್ಲೆಯಲ್ಲಿ ಪಶುವೈದ್ಯರ ಸಂಖ್ಯೆ ಕಡಿಮೆಯಿದ್ದು ಹುದ್ದೆಗಳ ಭರ್ತಿಗೆ ಸರ್ಕಾರದ ಕ್ರಮವೇನು?</td><td>ಇಲಾಖೆಯಲ್ಲಿ ಖಾಲಿಯಿರುವ ಪಶುವೈದ್ಯಾಧಿಕಾರಿಗಳ ಪೈಕಿ 400 ಪಶುವೈದ್ಯಾಧಿಕಾರಿಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.<br><br>ಜಿಲ್ಲೆಯಲ್ಲಿ ಖಾಲಿಯಿರುವ ಪಶುವೈದ್ಯರ ಹುದ್ದೆಗಳಿಗೆ ಎದುರಾಗಿ 20 ಗುತ್ತಿಗೆ ಪಶುವೈದ್ಯರುಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿರುತ್ತದೆ.<br><br>ಇದಲ್ಲದೇ ಹೆಚ್ಚುವರಿಯಾಗಿ 400 ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿಗಾಗಿ ಕೋರಿದ್ದು, ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.</td></tr>
</table>

**ಸಂಖ್ಯೆ:ಪಸಂಮೀ 79 ಪಅಸೇ 2026**

**(ಕೆ. ವೆಂಕಟೇಶ್)**
ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು